## ಸ್ಮಶಾನದಲ್ಲಿ ಮದಂತ-ಮಲ್ಲಿಗೆ

ಮಲ್ಲಿಗೆ 'ಅಂದರೆ ಈ ಮಾಂತ್ರಿಕ ವಿದ್ಯೆ ಇದೆಯೋ ಇಲ್ಲವೋ ಅಂತ ತಿಳಿಯಲು ನನ್ನ ತಂದೆತಾಯಿ ಇಂಥ ಹೇಯಕೃತ್ಯ ಮಾಡಿದರೆ?' ರುದ್ರನಾಗ ಕಂಬನಿಯನ್ನು ಒರೆಸಿಕೊಂಡು 'ಇಪ್ಪತ್ತು ವರ್ಷಗಳಿಂದ ನಾನು ಕೊರಗಿ ಕೊರಗಿ ಕೃಶನಾಗಿ ಹೋಗಿದ್ದೇನೆ.'

ಮಲ್ಲಿಗೆ ಅಂದುಕೊಂಡಳು. ಹೆಂಡತಿಮಕ್ಕಳ ಮೇಲೆ ಈ ಮಾವನೇ ಕ್ಷುದ್ರಶಕ್ತಿಗಳನ್ನು ಪ್ರಯೋಗಿಸಿ ಸಾವನ್ನು ತಂದಿದ್ದಾರೆ. ಅದಕ್ಕೆ ಕಾರಣ ನನ್ನ ತಂದೆ. ಬಹುಶಃ ಈ ಕಾರಣದಿಂದಲೇ ಏನೋ ಮಾವ ನನ್ನ ಬಗ್ಗೆ ಕರುಣೆ ತೋರಿಸುತ್ತಿರಲಿಲ್ಲ ಅಂತ ಕಾಣುತ್ತದೆ.

'ಮಲ್ಲಿಗೆ... ನಾನು ನಿನಗೆ ಮಾಂತ್ರಿಕ ವಿದ್ಯೆಯನ್ನು ಕಲಿಸಿದ್ದು ಯಾಕೆ ಅಂತ ಗೊತ್ತೆ?' ಎಂದು ಕೇಳುತ್ತಾನೆ ರುದ್ರನಾಗ. ಗೊತ್ತಿಲ್ಲ ಎಂಬಂತೆ ತಲೆಯಾಡಿಸಿದಳು. ರುದ್ರನಾಗ ಕೋಪ, ಆವೇಶದಿಂದ 'ಮಾಂತ್ರಿಕ ವಿದ್ಯೆ ಸುಳ್ಳಲ್ಲ ಎಂಬುದು ಜೀವನದಲ್ಲಿ ಮತ್ತೊಂದು ಸಲ ನಿನ್ನ ತಂದೆತಾಯಿಗೆ ಅರಿವಾಗಬೇಕು'.

ಗಾಬರಿಯಿಂದ 'ಅಂದರೆ... ಅಂದರೆ?'

'ನಿನ್ನ ತಂದೆತಾಯಿಯ ಮೇಲೆ ನಾನು ಹೇಳುವ ಕ್ಷುದ್ರಶಕ್ತಿಯನ್ನು ಪ್ರಯೋಗ ಮಾಡಬೇಕು' ಎನ್ನುತ್ತಾನೆ. ಉತ್ತರಿಸಲಿಲ್ಲ ಅವಳು. ರುದ್ರನಾಗ ಕಟುವಾಗಿ 'ಮತ್ತೊಬ್ಬರ ಪ್ರಾಣಗಳ ಜೊತೆ ಹುಡುಗಾಟ ಆಡಿದ ನಿನ್ನ ತಂದೆತಾಯಿಯ ಬಗ್ಗೆ ನೀನು ಅನುಕಂಪ ತೋರಿಸಬೇಡ'.

